# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ), ಶ್ರೀ ಎಸ್. ವ್ಹಿ. ಸಂಕನೂರ ರವರುಗಳು ನಿಯಮ-330 ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಗ್ರಾಮ ಪಂಚಾಯತಿಗಳ ಮೂಲಕ ಆಸ್ತಿಗಳಿಗೆ ನೀಡುತ್ತಿರುವ ನಮೂನೆ 9 ಮತ್ತು 11 ರ ವಿತರಣೆಯಲ್ಲಿ ಆಗುತ್ತಿರುವ ತೊಂದರೆಗಳು, ಸರ್ಕಾರದ ಆದೇಶಗಳಲ್ಲಿನ ಗೊಂದಲಗಳು, ಸರ್ಕಾರದ ಅಧಿಸೂಚನೆಗೂ ಹಿಂದಿನ ಕ್ರಮಬದ್ಧವಲ್ಲದ ಆಸ್ತಿಗಳಿಗೆ ಮತ್ತು 9 & 11ಎ ವಿತರಿಸಲು ಆದೇಶವಿದ್ದರೂ 11ಬಿ ನೀಡುತ್ತಿರುವುದು, ಕುಟುಂಬದೊಳಗಿನ ಆಸ್ತಿ ವಿಭಜನೆಯ ಸಂದರ್ಭದಲ್ಲಿ ನಮೂನೆ 9 ಮತ್ತು 11 ವಿತರಿಸಲು Town and Country Planning ನಿಂದ ನಕ್ಷೆ ಅನುಮೋದನೆ ಕಡ್ಡಾಯಗೊಳಿಸಿರುವುದು, ಲೇಔಟ್ 15-20 ಸೆಂಟ್ಸ್ –ಜಾಗಗಳಿಗೂ ಭೂ ಪರಿವರ್ತನೆ ನಂತರ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದ ಅನುಮೋನದೆ ಕಡ್ಡಾಯಗೊಳಿಸಿರುವುದು ಸೇರಿದಂತೆ ಒಟ್ಟಾರೆ ನಮೂನೆ 9 ಮತ್ತು 11 ವಿತರಣೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಮತ್ತು ಸಾರ್ವಜನಿಕ ಸ್ನೇಹಿಯಾಗಿ ಸರಳ ನಿಯಮಾವಳಿ ರೂಪಿಸುವ ಬಗ್ಗೆ.

**ಉತ್ತರ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ನೊಂದಣಿ, ಮಾರಾಟ ಮುಂತಾದ ವಹಿವಾಟುಗಳನ್ನು ತಡೆಗಟ್ಟುವ ಸಲುವಾಗಿ ಇ-ಸ್ವತ್ತು ತಂತ್ರಾಂಶ ರೂಪಿಸಿ ದಿನಾಂಕ:15-06-2013 ರಿಂದ ಜಾರಿಗೊಳಿಸಲಾಗಿದೆ.

**ಇ-ಸ್ವತ್ತು ತಂತ್ರಾಂಶದ ಜಾರಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.**

(ಎ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಕ್ರಮಬದ್ಧ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿವರವನ್ನು ನಮೂನೆ-9 ರಲ್ಲಿ ಹಾಗೂ ಆ ಆಸ್ತಿಯ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಮೂನೆ 11 ಎ ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಡಿಜಿಟಲ್ ಸಹಿಯ ಮೂಲಕ ವಿತರಿಸುವರು.

1. ಗ್ರಾಮ ಠಾಣಾ ಒಳಗಡೆ ಇರುವ ಆಸ್ತಿಗಳು.
2. ಕಂದಾಯ ಇಲಾಖೆಯಿಂದ ಭೂ ಪರಿವರ್ತನೆಯಾಗಿ ಸಕ್ಷಮ ಪ್ರಾಧಿಕಾರಗಳಿಂದ ಲೇಔಟ್ ಪ್ಲಾನ್ ಅನುಮೋದನೆಗೊಂಡಿರುವ ಆಸ್ತಿಗಳು.
3. ಸರ್ಕಾರದ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸೃಜಿಸರುವ ಆಸ್ತಿಗಳು.
4. ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಪ್ರಕರಣ 94 ಸಿ, 94ಸಿಸಿ ಮತ್ತು 94 ಡಿ ರಡಿಯಲ್ಲಿ ಮಂಜೂರಾದ ಆಸ್ತಿಗಳು.
5. ಏಕ ನಿವೇಶನ ನಕ್ಷೆ ಅನುಮೋದನೆಯಾಗಿರುವ ಆಸ್ತಿಗಳು (ಸಿಂಗಲ್ ಸೈಟ್ ಲೇಔಟ್ ಪ್ಲಾನ್ ಅಪ್ರೂವಲ್)
6. ಕೈಗಾರಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯುಂಟ ಆಸ್ತಿಗಳು.
7. ವಾಣಿಜ್ಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು
8. ಬಹು ಅಂತಸ್ತು ವಸತಿ ಸಮುಚ್ಚಯ (ಅಪಾರ್ಟ್ಮೆಂಟ್) - ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು.
9. ದಿನಾಂಕ: 16-11-1992 ಕ್ಕಿಂತ ಪೂರ್ವದಲ್ಲಿ ಮಂಡಲ / ಗ್ರಾಮ ಪಂಚಾಯತಿಗಳಿಂದ ಬಡಾವಣೆ ಎಂದು ಅನುಮೋದನೆಯಾಗಿರುವ ಆಸ್ತಿಗಳು.
10. ದಿನಾಂಕ:11-11-2014 ರ ನಂತರ ತಾಲ್ಲೂಕು ಪಂಚಾಯತಿಗಳಿಂದ ಅನುಮೋದನೆಯಾಗಿರುವ ಬಡಾವಣೆ ಆಸ್ತಿಗಳು (ಒಂದು ಎಕರೆಗಿಂತ ಕಡಿಮೆ ವಿಸ್ತೀರ್ಣವಿದ್ದಲ್ಲಿ)
11. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ BDA, BMRDA, BIAAPA, KHB, KIADB, UDA's & LPA's ಅನುಮೋದಿಸಿದ ಬಡಾವಣೆಗಳಲ್ಲಿ ಬರುವ ಆಸ್ತಿಗಳು.

12. ದಿನಾಂಕ:14-06-2013 ರ ಪೂರ್ವದಲ್ಲಿ ಸೃಜನೆಯಾಗಿರುವ ಮತ್ತು ಗ್ರಾಮ ಪಂಚಾಯತಿಗಳು ನೀಡಿರುವ ಲೈಸೆನ್ಸ್ ಪಡೆದು ಖಾಯಂಯಾಗಿ ಈಗಾಗಲೇ ಮನೆ ನಿರ್ಮಾಣ ಮಾಡಿಕೊಂಡಿರುವ ಆಸ್ತಿಗಳು.

**(ಬಿ) ನಮೂನೆ 11-ಬಿ ಯಲ್ಲಿ ನೀಡಲಾಗುವ ಕ್ರಮಬದ್ಧವಲ್ಲದ ಆಸ್ತಿಗಳು:-**

1. ದಿನಾಂಕ:14-06-2013 ಕ್ಕಿಂತ ಮುಂಚೆ 1 ಬಾರಿ ಕ್ರಯವಾಗಿರುವ ನಿವೇಶನಗಳು,
2. ದಿನಾಂಕ:14-06-2013 ಕ್ಕೆ ಮೊದಲು ಕಟ್ಟಡವಾಗಿದ್ದು, ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಪ್ರಕರಣಗಳು,
3. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (1) ರನ್ವಯ ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳು ಮತ್ತು
4. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 95(2) ರನ್ವಯ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ಪ್ರತಿ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸುವುದಕ್ಕೆ ವಿನಾಯಿತಿ ನೀಡಿ ನಮೂನೆ 11ಬಿ ಯನ್ನು ಕೈಬರಹದ ಮೂಲಕ ನೀಡಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 956 ಗ್ರಾಪಂಅ 2016(ಭಾಗ-1), ದಿನಾಂಕ:23.02.2018 ರನ್ವಯ ದಿನಾಂಕ:14.06.2013ರ ಪೂರ್ವದಲ್ಲಿ ಸೃಜನೆಯಾಗಿರುವ ಮತ್ತು ಗ್ರಾಮ ಪಂಚಾಯಿತಿಗಳ ನೀಡಿರುವ ಲೈಸೆನ್ಸ್ ಪಡೆದು, ಖಾಯಂಯಾಗಿ ಈಗಾಗಲೇ ಅನುಮೋದನೆ ನೀಡಿರುವ ಹಾಗೂ ದಿನಾಂಕ:11.11.2014ರ ಪೂರ್ವದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ ಗ್ರೂಪ್/ಮಂಡಲ/ಗ್ರಾಮ ಪಂಚಾಯಿತಿಯ ವಿನ್ಯಾಸ ಅನುಮೋದಿತ ಆಸ್ತಿಗಳಿಗೆ ನಮೂನೆ 9 ಮತ್ತು 11 ಎ ವಿತರಿಸಲು ಅವಕಾಶವಿರುತ್ತದೆ. ಆದರೆ, ಇಂತಹ ಆಸ್ತಿಗಳಿಗೆ ನಮೂನೆ 11 ಬಿ ನೀಡಿದ್ದರೂ, ಅವುಗಳನ್ನು ನಮೂನೆ 9 ಮತ್ತು 11 ಎ ಗಳಿಗೆ ಪರಿವರ್ತಿಸಲು ಅವಕಾಶ ಇರುತ್ತದೆ.

ಮುಂದುವರೆದು, ಭೂ-ಪರಿವರ್ತನೆಯಾಗಿ ಕಟ್ಟಡ ನಿರ್ಮಾಣವಾಗಿದ್ದಲ್ಲಿ ದಿನಾಂಕ:14.06.2013ರ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುತ್‌ಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಅಥವಾ ನಿವೇಶನವಾಗಿದ್ದಲ್ಲಿ ದಿನಾಂಕ:14.06.2013ರ ಪೂರ್ವದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಬಾರಿ ವರ್ಗಾವಣೆಗೆ ಒಳಪಟ್ಟಿರುವ ಆಸ್ತಿಗಳಿಗೆ ವರ್ಗಾವಣೆಗೆ ಅವಕಾಶ ಇರುವ ನಮೂನೆ 11ಬಿ ಗಳ ವಿತರಣೆಗೆ ಅವಕಾಶವಿದ್ದು, ಯಾವುದೇ ಗೊಂದಲಗಳಿರುವುದಿಲ್ಲ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 28 ಮತ್ತು 30 ರನ್ವಯ ನಿರ್ವಹಿಸಲಾಗುವ ನಮೂನೆ 9 ಮತ್ತು 11ಎ ಹಾಗೂ ನಮೂನೆ 11ಬಿ ವಹಿಗಳ ನಿರ್ವಹಣೆಗೆ ಅನುಗುಣವಾಗಿ ಅವುಗಳ ಸ್ವಾಧೀನತೆಗೆ ಸಂಬಂಧಿಸಿದಂತೆ ಹಾಗೂ ಮಾಲೀಕರ ವಿವರಗಳ ದಾಖಲೆಗಳ ಸಂಗ್ರಹದ ಮೂಲಕ ನಮೂನೆಗಳ ವಿತರಣೆಗೆ ಕ್ರಮ ವಹಿಸಲಾಗಿದೆ. ಇದರ ಸಂಬಂಧ ಗ್ರಾಮ ಪಂಚಾಯಿತಿಗಳಿಗೆ ಇಲಾಖೆಯಿಂದ ಸುತ್ತೋಲೆ, ಆದೇಶ, ಪತ್ರಗಳ ಮೂಲಕ ಕಾಲಕಾಲಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದ್ದು, ಸಾರ್ವಜನಿಕರ ವೀಕ್ಷಣೆಗೆ ಇ-ಸ್ವತ್ತು ತಂತ್ರಾಂಶದಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

ಯಾವುದೇ ಆಸ್ತಿ ವಿಭಜನೆ ಅಥವಾ ಒಟ್ಟುಗೂಡಿಸುವ ಸಂಬಂಧ ಹಾಗೂ ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಯಾವುದೇ ಭೂಮಿಯ ಮೇಲೆ ಅಭಿವೃದ್ಧಿಯನ್ನು ಕೈಗೊಳ್ಳಲು ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಪ್ರಕರಣ 4-ಕೆ ರನ್ವಯ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಕ್ರಮವಹಿಸಬೇಕಾಗಿರುತ್ತದೆ.

**ಸಂಖ್ಯೆ: ಗ್ರಾಅಪ 710 ಗ್ರಾಪಂಅ 2024**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.